# SINDHI HIGH SCHOOL, BENGALURU

## HALF YEARLY EXAMINATION (2025-26)

## SUBJECT: II LANGUAGE KANNADA

**Class: VIII** | **Marks: 80**
**Date: 15.09.2025** | **Reading Time: 8:15am- 8:30am**
**No of Sides: 8** | **Writing Time: 8:30am- 11:30am**

---

**ಸೂಚನೆಗಳು:**

1. ಈ ಪ್ರಶ್ನೆಪತ್ರಿಕೆಯು A, B ಎಂಬ ಎರಡು ಭಾಗಗಳನ್ನು ಮತ್ತು A, B, C, D ಎಂಬ ನಾಲ್ಕು ವಿಭಾಗಗಳನ್ನು, ಒಟ್ಟು 15 ಪ್ರಶ್ನೆಗಳನ್ನು ಒಳಗೊಂಡಿದೆ.
2. ವಿಭಾಗ- ಎ, ವಾಚನ ಮತ್ತು ಗ್ರಹಿಕಾ ಕೌಶಲ್ಯ.
   ಅಪಠಿತ ಗದ್ಯಭಾಗ ಪ್ರಶ್ನೆ ಸಂಖ್ಯೆ 1 ಮತ್ತು 2.
   ಪಠಿತ ಗದ್ಯಭಾಗ ಪ್ರಶ್ನೆ ಸಂಖ್ಯೆ 3 ಮತ್ತು ಪಠಿತ ಪದ್ಯಭಾಗ ಪ್ರಶ್ನೆ ಸಂಖ್ಯೆ 4.
3. ವಿಭಾಗ- ಬಿ, ಬಹುಆಯ್ಕೆ ಪ್ರಶ್ನೆಗಳು (ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ) ಪ್ರಶ್ನೆ ಸಂಖ್ಯೆ 5 ರಿಂದ 7.
4. ವಿಭಾಗ- ಸಿ, ಬರವಣಿಗೆ ಕೌಶಲ್ಯ (ಪತ್ರ, ವರದಿ ಮತ್ತು ಪ್ರಬಂಧ) ಪ್ರಶ್ನೆ ಸಂಖ್ಯೆ 8 ರಿಂದ 10.
5. ವಿಭಾಗ- ಡಿ, ಪಠ್ಯಗಳ ಅಧ್ಯಯನ- ಪ್ರಶ್ನೆ ಸಂಖ್ಯೆ 11 ರಿಂದ 15.
   ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ನೀಡಿರುವ ಸೂಚನೆಗಳನ್ನು ಗಮನಿಸಿ.
   ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಉತ್ತರ ಹಾಳೆಯಲ್ಲಿ ಪ್ರಶ್ನೆ ಸಂಖ್ಯೆಯನ್ನು ಬರೆಯಿರಿ.

---

| | | |
|---|---|---|
| ಭಾಗ- A (40 ಅಂಕಗಳು) | ವಾಚನ ಮತ್ತು ಗ್ರಹಿಕಾ ಕೌಶಲ್ಯ | 20 ಅಂಕಗಳು |
| | ಅನ್ವಯಿಕ ವ್ಯಾಕರಣ | 15 ಅಂಕಗಳು |
| | ಪಠ್ಯಪೂರಕ ಅಧ್ಯಯನ | 5 ಅಂಕಗಳು |
| ಭಾಗ- B (40 ಅಂಕಗಳು) | ಬರವಣಿಗೆ ಕೌಶಲ್ಯ | 12 ಅಂಕಗಳು |
| | ಪಠ್ಯಗಳ ಅಧ್ಯಯನ | 28 ಅಂಕಗಳು |
| | ಒಟ್ಟುಅಂಕಗಳು | 80 ಅಂಕಗಳು |

## ಭಾಗ -A (40 ಅಂಕಗಳು)
## ವಿಭಾಗ- ಎ
## ವಾಚನ ಮತ್ತು ಗ್ರಹಿಕಾ ಕೌಶಲ್ಯ: 20

**I. ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**5x1=5**

ಭಾರತದಲ್ಲಿ ಕರ್ನಾಟಕ ರಾಜ್ಯದ ದಕ್ಷಿಣ ಭಾಗವು ವಿಶಿಷ್ಟವಾದ ಕಲೆ ಮತ್ತು ಸಂಸ್ಕೃತಿಯನ್ನು ಹೊಂದಿದೆ. ಕರ್ನಾಟಕದ ಸ್ಥಳೀಯ ಮೂಲದ ವೈವಿಧ್ಯಮಯ ಭಾಷಾ ಮತ್ತು ಧಾರ್ಮಿಕ ಜನಾಂಗೀಯತೆಯು ರಾಜ್ಯದ ದೀರ್ಘಕಾಲೀನ ಐತಿಹಾಸಿಕ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಕರ್ನಾಟಕದ ಕರಾವಳಿ ಭಾಗದಲ್ಲಿ ಸಾಂಪ್ರದಾಯಿಕ ಜಾನಪದ ಕಲೆಗಳು ರಂಗಭೂಮಿಯ ಪ್ರಮುಖ ರೂಪವಾಗಿದೆ. ಭಾರತದಲ್ಲಿ ಕರ್ನಾಟಕದ ಸಮಕಾಲೀನ ರಂಗಭೂಮಿಯ ಸಂಸ್ಕೃತಿಯ ಕೇಂದ್ರಗಳಲ್ಲಿ ಗುಬ್ಬಿ ವೀರಣ್ಣ ನಾಟಕ ಕಂಪನಿಯು ಒಂದು. ಅಲ್ಲದೆ ಸಂಘಟನೆಗಳಾದ ಹೆಗ್ಗೋಡಿನ ನೀನಾಸಂ, ಬೆಂಗಳೂರಿನ ಶಂಕರ ಮತ್ತು ಮೈಸೂರು ರಂಗಾಯಣ ಈ ರಂಗಕೇಂದ್ರಗಳು ಪ್ರಸಿದ್ಧವಾಗಿವೆ. ವೀರಗಾಸೆ, ಕಂಸಾಳೆ ಮತ್ತು ಡೊಳ್ಳು ಕುಣಿತ ಜನಪ್ರಿಯ ಜನಪದ ನೃತ್ಯ ಪ್ರಕಾರಗಳಾಗಿವೆ. ಭರತನಾಟ್ಯವು ಸಹ ಕರ್ನಾಟಕದಲ್ಲಿ ವ್ಯಾಪಕ ಪ್ರೋತ್ಸಾಹವನ್ನು ಹೊಂದಿದೆ.

ಹಿಂದೂಸ್ಥಾನಿ ಸಂಗೀತದಲ್ಲೂ ಕರ್ನಾಟಕವು ಒಂದು ಪ್ರಮುಖ ಸ್ಥಾನವನ್ನು ಗಳಿಸಿದೆ. ಕರ್ನಾಟಕದ ಹಲವಾರು ಹಿಂದೂಸ್ಥಾನಿ ಸಂಗೀತಗಾರರು ಕಾಳಿದಾಸ ಸನ್ಮಾನ, ಪದ್ಮ ಭೂಷಣ ಮತ್ತು ಪದ್ಮ ವಿಭೂಷಣ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಕೆಲವು ಪ್ರಸಿದ್ಧ ಸಂಗೀತಕಾರರು ಗಂಗೂಬಾಯಿ ಹಾನಗಲ್ಲ, ಪುಟ್ಟರಾಜ್ ಗವಾಯಿ, ಪಂಡಿತ ಭೀಮಸೇನ್ ಜೋಶಿ, ಪಂಡಿತ ಮಲ್ಲಿಕಾರ್ಜುನ್ ಮನ್ಸೂರ್, ಬಸವರಾಜ ರಾಜಗುರು, ಗಂಧರ್ವ ಮತ್ತು ಕುಮಾರ ಗಂಧರ್ವ .

ಯಕ್ಷಗಾನವು ಕರ್ನಾಟಕದ ಕರಾವಳಿಯ ಒಂದು ನಾಟಕೀಯ ರೂಪವಾಗಿದೆ. ಜಾನಪದ ಮತ್ತು ಶಾಸ್ತ್ರೀಯ ಸಂಪ್ರದಾಯದ ಸಮ್ಮೇಳನವು ಯಕ್ಷಗಾನವನ್ನು ವರ್ಣರಂಜಿತ ವೇಷಭೂಷಣಗಳು, ಸಂಗೀತ, ನೃತ್ಯ, ಹಾಡುವಿಕೆ, ಮತ್ತು ಮುಖ್ಯವಾಗಿ ಸಂಭಾಷಣೆಗಳನ್ನು ಸಂಯೋಜಿಸುವ ಒಂದು ವಿಶಿಷ್ಟವಾದ ಕಲೆಯ ರೂಪವನ್ನು ಮಾಡುತ್ತದೆ. ಯಕ್ಷಗಾನ ನೃತ್ಯಪ್ರಧಾನ ಕಲೆ. ಇದು ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುವ ಅಪೂರ್ವ ಶಕ್ತಿಯುಳ್ಳ ಕಲೆ. ಯಕ್ಷಗಾನಕ್ಕೆ ದಶಾವತಾರ, ಬಯಲಾಟ, ಭಾಗವತರಾಟ ಎಂಬ ಹೆಸರೂ ಇವೆ. ಯಕ್ಷಗಾನ ಕಲಿಸುವವನೇ ಭಾಗವತನಾದ್ದರಿಂದ ಭಾಗವತರಾಟ ಎಂಬ ಹೆಸರು ಬಂದಿದೆ. ಯಕ್ಷಗಾನ ಪ್ರಶಸ್ತಿ ವಿಜೇತ ಪ್ರದರ್ಶಕರಲ್ಲಿ ಶಂಭು ಹೆಗ್ಡೆ, ಚಿಟ್ಟಾಣಿ ರಾಮಚಂದ್ರ ಹೆಗ್ಡೆ, ಕೆರೆಮನೆ ಶಿವರಾಮ ಹೆಗ್ಡೆ, ಮಹಾಬಲ ಹೆಗ್ಡೆ ಸೇರಿದ್ದಾರೆ.

**<u>ಪ್ರಶ್ನೆಗಳು</u>**:

**1.** ನೀನಾಸಂ ಎಂಬುದು ಒಂದು ____________________

A) ಅರಮನೆ B) ಪರ್ವತ ಶ್ರೇಣಿ C) ಚಲನಚಿತ್ರ D) ರಂಗಕೇಂದ್ರ

**2.** ಹಿಂದೂಸ್ಥಾನಿ ಸಂಗೀತ ಕ್ಷೇತ್ರದಲ್ಲಿ ಪ್ರಮುಖ ಸ್ಥಾನವನ್ನು ಗಳಿಸಿದವರಲ್ಲಿ ಇವರೂ ಒಬ್ಬರು _______

A) ಶಂಭು ಹೆಗ್ಡೆ B) ರಾಮಚಂದ್ರ ಹೆಗ್ಡೆ C) ಗಂಗೂಬಾಯಿ ಹಾನಗಲ್ಲ D) ಮಹಾಬಲ ಹೆಗ್ಡೆ

**3.** ವೀರಗಾಸೆ, ಕಂಸಾಳೆ ಮತ್ತು ಡೊಳ್ಳು ಕುಣಿತ ಇವುಗಳು _______________ ಪ್ರಕಾರಗಳಾಗಿವೆ.

A) ಹಬ್ಬಗಳು B) ಜಾನಪದ ನೃತ್ಯ C) ಜಾನಪದ ಉಡುಗೆ D) ವಸ್ತುಗಳು

**4.** ಯಕ್ಷಗಾನ ಕಲಿಸುವವನೇ ಭಾಗವತನಾದ್ದರಿಂದ ಇದಕ್ಕೆ _______________ ಎಂಬ ಹೆಸರು ಬಂದಿದೆ.

A) ಭಾಗವತರಾಟ B) ಭರತನಾಟ್ಯ C) ಕೋಲಾಟ D) ವೀರಗಾಸೆ

**5.** ಯಕ್ಷಗಾನವು ಒಂದು ______________ ಪ್ರಧಾನ ಕಲೆಯಾಗಿದೆ.
A) ವಾದ್ಯ B) ಸಂಗೀತ C) ತಾಳ-ಮೇಳ D) ನೃತ್ಯ

**II. ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**
**5x1=5**

ಆಲೂರು ವೆಂಕಟರಾಯರು ಕನ್ನಡ ಸಾಹಿತ್ಯಲೋಕದ, ಪ್ರಮುಖರಲ್ಲೊಬ್ಬರು. ಇವರು ಕನ್ನಡ ಸಾಹಿತ್ಯ, ಪತ್ರಿಕೋದ್ಯಮ, ಸಾಂಸ್ಕೃತಿಕ ವಲಯದಲ್ಲಿ ನೀಡಿರುವ ಕಾಯಕಲ್ಪದಿಂದಾಗಿ ಕನ್ನಡ ಕುಲಪುರೋಹಿತರು ಎಂಬ ಗೌರವಾನ್ವಿತ ಸ್ಥಾನ ಪಡೆದವರಾಗಿದ್ದಾರೆ. ಆಲೂರು ವೆಂಕಟರಾಯರು 1880ರ ಜುಲೈ 12ರಂದು ವಿಜಯಪುರದಲ್ಲಿ ಜನಿಸಿದರು. ಇವರ ವಂಶಜರು ಧಾರವಾಡದ ಬಳಿಯ ಆಲೂರಿಗೆ (ಈಗಿನ ಗದಗ ಜಿಲ್ಲೆ, ರೋಣ ತಾಲೂಕಿನ ಹೊಳೆ ಆಲೂರಿಗೆ) ಬಂದು ನೆಲೆಸಿದ್ದರಿಂದ 'ಆಲೂರು' ಇವರ ಮನೆತನದ ಹೆಸರಾಯಿತು. ತಂದೆ ಭೀಮರಾಯರು, ತಾಯಿ ಭಾಗೀರಥಮ್ಮ.

ಆಲೂರು ವೆಂಕಟರಾಯರು ಆ ಕಾಲದ ಸಾಮಾಜಿಕ ಚಟುವಟಿಕೆಗಳ ಮುಂಚೂಣಿಯಲ್ಲಿದ್ದರು. 1921ರಲ್ಲಿ ಮಹಾತ್ಮ ಗಾಂಧಿಯವರು ಆರಂಭಿಸಿದ ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಿದರು. ಕರ್ನಾಟಕದ ಏಕೀಕರಣ, ಕರ್ನಾಟಕ ಇತಿಹಾಸ ಮಂಡಲದ ಸ್ಥಾಪನೆ, ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ, ಕರ್ನಾಟಕ ವಿಶ್ವವಿದ್ಯಾನಿಲಯದ ಕಲ್ಪನೆ, ವಿಜಯನಗರ ಮಹೋತ್ಸವ, ನಾಡಹಬ್ಬದ ಯೋಜನೆ, ಕರ್ನಾಟಕ ವಿದ್ಯಾವರ್ಧಕ ಸಂಘ (ಧಾರವಾಡ), ಈ ಎಲ್ಲಾ ಯೋಜನೆಗಳಲ್ಲಿ ಆಲೂರು ವೆಂಕಟರಾಯರು ಮಹತ್ವದ ಪಾತ್ರ ವಹಿಸಿದ್ದಾರೆ. 1907ರಲ್ಲಿಯೆ ಕನ್ನಡ ಗ್ರಂಥಕರ್ತರ ಸಮ್ಮೇಳನವನ್ನು ನಡೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಪ್ರಕಾಶಕರಿಗೆ ಅನುಕೂಲವಾಗಲು ಕರ್ನಾಟಕ ಗ್ರಂಥ ಮಂಡಳಿಯನ್ನು ಸ್ಥಾಪಿಸಿದ್ದರು.

ಆಲೂರು ವೆಂಕಟರಾಯರು ಸುಮಾರು ಇಪ್ಪತ್ತೈದು ಕೃತಿಗಳನ್ನು ಬರೆದಿದ್ದು ಕೆಲವು ಇಂತಿವೆ- ಶ್ರೀ ವಿದ್ಯಾರಣ್ಯ ಚರಿತ್ರೆ, ಕರ್ನಾಟಕ ಗತವೈಭವ, ಕರ್ನಾಟಕ ವೀರರತ್ನಗಳು, ಶಿಕ್ಷಣ ಮೀಮಾಂಸೆ (ಅನುವಾದ), ರಾಷ್ಟ್ರೀಯತ್ವದ ಮೀಮಾಂಸೆ, ಕನ್ನಡಿಗರ ಭ್ರಮನಿರಸನ (ನಾಟಕ), 'ಕರ್ನಾಟಕತ್ವದ ವಿಕಾಸ, ಆತ್ಮಕಥನ - ನನ್ನ ಜೀವನ ಸ್ಮೃತಿಗಳು ಎಂಬ ಹೆಸರಿನಲ್ಲಿ ಎರಡು ಭಾಗಗಳಲ್ಲಿ ಪ್ರಕಟಿಸಿದ್ದಾರೆ. ಲೋಕಮಾನ್ಯ ತಿಲಕರು ಬರೆದಿರುವ ಗೀತಾ ರಹಸ್ಯ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಆಲೂರು ವೆಂಕಟರಾಯರು 1930ರಲ್ಲಿ ಮೈಸೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕನ್ನಡದ ಜನತೆ ಇವರಿಗೆ 'ದೇಶಸೇವಾ ಧುರೀಣ ಸಭಾಷಾ ರಕ್ಷಕ' ಎಂದು ಕರೆದು ಸನ್ಮಾನಿಸಿದೆ. ಆಲೂರು ವೆಂಕಟರಾಯರು 1964ರ ಫೆಬ್ರುವರಿ 25 ರಂದು ನಿಧನ ಹೊಂದಿದರು.

**ಪ್ರಶ್ನೆಗಳು**:

**1.** ಕನ್ನಡದ ಕುಲಪುರೋಹಿತ ಎಂದು ______________________ರನ್ನು ಕರೆಯುತ್ತಾರೆ.
A) ಆಲೂರು ವೆಂಕಟರಾಯರು B) ಕುವೆಂಪು C) ಲೋಕಮಾನ್ಯ ತಿಲಕ್ D) ದ ರಾ ಬೇಂದ್ರೆ

**2.** ಕರ್ನಾಟಕ ವಿದ್ಯಾವರ್ಧಕ ಸಂಘ ___________________ ಜಿಲ್ಲೆಯಲ್ಲಿದೆ.
A) ಗದಗ B) ಧಾರವಾಡ C) ತುಮಕೂರು D) ಬೆಂಗಳೂರು

**3.** ಸತ್ಯಾಗ್ರಹ ಚಳುವಳಿಯನ್ನು ಆರಂಭಿಸಿದವರು _______________________
A) ಲೋಕಮಾನ್ಯ ತಿಲಕ್ B) ಮಹಾತ್ಮಾ ಗಾಂಧಿ C) ಭೀಮರಾಯರು D) ವೆಂಕಟರಾಯರು

**4.** ಆಲೂರು ವೆಂಕಟರಾಯರು _______________ ವರ್ಷದಲ್ಲಿ ನಿಧನರಾದರು.

A) 1921 B) 1880 C) 1964 D) 1930

**5.** ಲೋಕಮಾನ್ಯ ತಿಲಕರು ಬರೆದಿರುವ ಕೃತಿ___________________

A) ಶಿಕ್ಷಣ ಮೀಮಾಂಸೆ B) ಕನ್ನಡಿಗರ ಭ್ರಮನಿರಸನ

C) 'ಕರ್ನಾಟಕತ್ವದ ವಿಕಾಸ D) ಗೀತಾ ರಹಸ್ಯ

**III. ಈ ಕೆಳಗೆ ಕೊಟ್ಟಿರುವ 'ಡಾ.ಎನ್.ಲಕ್ಷ್ಮೀನಾರಾಯಣ ಭಟ್ಟ'ರವರು ಬರೆದಿರುವ 'ಸಾರ್ಥಕ ಬದುಕಿನ ಸಾಧಕ' ಪಠಿತ ಗದ್ಯಭಾಗವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 5X1=5**

ಡಿವಿಜಿ ಅವರ ಹುಟ್ಟೂರು ಕೋಲಾರ ಜಿಲ್ಲೆಗೆ ಸೇರಿದ ಮುಳಬಾಗಿಲು. ಅವರದು ವೇದಶಾಸ್ತ್ರ ಸಂಪನ್ನರಾದ ಹಿರಿಯರಿದ್ದ ಕುಟುಂಬ. ಅವರ ತಂದೆ ವೆಂಕಟರಮಣಯ್ಯ, ತಾಯಿ ಅಲಮೇಲಮ್ಮ. ಡಿವಿಜಿ ಅವರ ಮನಸ್ಸಿನ ಮೇಲೆ ಬಹಳ ಪ್ರಭಾವ ಬೀರಿದ ವ್ಯಕ್ತಿಗಳು ಇಬ್ಬರು. ಒಬ್ಬರು ಅವರ ಅಜ್ಜಿ, ಎಂದರೆ ತಾಯಿಯ ತಾಯಿ ಸಾಕಮ್ಮ. ಮಹರ್ಷಿಪ್ರಾಯರಾದ ಚೇತನ ಎಂದು ಡಿವಿಜಿ ಅವರನ್ನು ವರ್ಣಿಸಿದ್ದಾರೆ. ಇನ್ನೊಬ್ಬರು ಅವರ ಸೋದರಮಾವ ತಿಮ್ಮಪ್ಪ. ಪ್ರಸಿದ್ಧ ಕೃತಿಯಾದ ಮಂಕುತಿಮ್ಮನ ಕಗ್ಗದಲ್ಲಿ ತಿಮ್ಮ ಅವರ ಹೃದಯಸ್ಪರ್ಶಿಯಾದ ಚಿತ್ರಣವಿದೆ. ಆ ಚಿತ್ರಣಕ್ಕೆ ಆಧಾರವಾದ ವ್ಯಕ್ತಿತ್ವ ಈ ತಿಮ್ಮಪ್ಪನವರದೇ.

ಡಿವಿಜಿ ಮುಳಬಾಗಿಲಿನ ಆಂಗ್ಲೋ ವರ್ನಾಕ್ಯುಲರ್ ಶಾಲೆಯಲ್ಲಿ ಲೋವರ್ ಸೆಕೆಂಡರಿ ಶಿಕ್ಷಣವನ್ನು ಪೂರ್ಣಗೊಳಿಸಿದರು. ಮುಂದಿನ ಓದಿಗೆ ಬೇರೆ ಊರಿಗೇ ಹೋಗಬೇಕು; ಆದರೆ ಹಣದ ಅನುಕೂಲವಿಲ್ಲ. ಓದು ಇಲ್ಲಿಗೆ ಸಾಕು ಎಂದು ತಂದೆ, ಅಜ್ಜಿ ತೀರ್ಮಾನಿಸಿದರು. ಆದರೆ ಡಿವಿಜಿ ಅವರ ಭಾಗ್ಯ ಎಂಬಂತೆ ಅವರ ಸಹಾಯಕ್ಕೆ ಬಂದವನು ರಸೂಲ್ ಖಾನ್. ಆತನೊಬ್ಬ ಬಂಡಿ ಹೊಡೆಯುವ ವ್ಯಕ್ತಿ. ಬಡವ, ಪ್ರಾಮಾಣಿಕ. ಡಿವಿಜಿ ಅವರ ತಂದೆಗೆ ಬೇಕಾಗಿದ್ದವನು. "ಗುಂಡಣ್ಣ ತುಂಬ ಚುರುಕಾದ ಹುಡುಗ. ಅವನು ಮುಂದೆ ಓದಲೇಬೇಕು", ಅಂತ ರಸೂಲ್‌ಖಾನ್ ಹಟ ಹಿಡಿದುಬಿಟ್ಟ. "ನೀವೆಲ್ಲ ಏನಾದರು ಹೇಳಿ. ಅವನನ್ನು ನನ್ನ ಬಂಡಿಯಲ್ಲಿ ಕೂರಿಸಿಕೊಂಡು ಬೌರಿಂಗ್ ಪೇಟೆ (ಬಂಗಾರಪೇಟೆ) ಗೆ ಹೋಗ್ತಿನಿ. ಬೆಂಗಳೂರಿನ ರೈಲಿನಲ್ಲಿ ಕೂರಿಸಿ ಟಿಕೆಟ್ ಕೊಡಿಸಿ, ಒಂದು ರೂಪಾಯಿ ಕೈ ಖರ್ಚಿಗೆ ಕೊಟ್ಟುಬಿಡ್ತೀನಿ. ಅವನ ಓದು ಮಾತ್ರ ನಡೀಲೇಬೇಕು", ರಸೂಲ್‌ಖಾನ್‌ನ ರಸೂಲ್ ಈ ನಿರ್ಧಾರ ಎಲ್ಲರನ್ನೂ ದಂಗುಬಡಿಸಿತು. ಎಲ್ಲ ಅವನು ಹೇಳಿದಂತೆಯೇ ನಡೆಯಿತು. ಡಿವಿಜಿ ಬೆಂಗಳೂರನ್ನು ಕಂಡದ್ದು ಹೀಗೆ ರಸೂಲ್‌ಖಾನನ ದಯೆಯಿಂದ.

ವಿಶ್ವೇಶ್ವರಯ್ಯ ಅವರು ದಿವಾನರಾಗಿದ್ದ ಕಾಲ. ಡಿವಿಜಿ ಆಗ ಯುವ ಪತ್ರಕರ್ತ. ದಸರಾ ಉತ್ಸವ ಬಂತು. ರಾಜ್ಯದ ಎಲ್ಲ ಪತ್ರಿಕೆಗಳೂ ಅದರ ವಿಶೇಷ ವರದಿ ನೀಡಿದವು. ಇದಾದ ನಾಲ್ಕು ದಿನಕ್ಕೆ ಪತ್ರಕರ್ತರಿಗೆಲ್ಲ ಸರ್ಕಾರದಿಂದ ದೊಡ್ಡ ಮೊತ್ತ ಸಂಭಾವನೆ ರೂಪದಲ್ಲಿ ಹೋಯಿತು. ಡಿವಿಜಿ ತಮಗೆ ಬಂದಿದ್ದ ಹಣದ ಸಹಿತ ದಿವಾನರಲ್ಲಿಗೆ ಬಂದರು.

**<u>ಪ್ರಶ್ನೆಗಳು</u> :**

1. ಡಿ.ವಿ.ಜಿಯವರ ಹುಟ್ಟೂರು ಯಾವುದು?
2. ರಸೂಲ್ ಖಾನ್ ಯಾರು?
3. ಡಿ.ವಿ.ಜಿಯವರ ಕೈ ಖರ್ಚಿಗೆ ರಸೂಲ್ ಖಾನ್ ಕೊಟ್ಟ ಹಣವೆಷ್ಟು?
4. ಡಿ.ವಿ.ಜಿಯವರು ಮುಳಬಾಗಿಲಿನ ಯಾವ ಶಾಲೆಯಲ್ಲಿ ಲೋವರ್ ಸೆಕೆಂಡರಿ ಶಿಕ್ಷಣವನ್ನು ಪೂರ್ಣಗೊಳಿಸಿದರು?
5. ಬೌರಿಂಗ್ ಪೇಟೆಯ ಈಗಿನ ಹೆಸರೇನು?

**IV. ಈ ಕೆಳಗೆ ಕೊಟ್ಟಿರುವ ರಾಷ್ಟ್ರಕವಿ ಎಂ. ಗೋವಿಂದ ಪೈ ಅವರು ಬರೆದಿರುವ 'ಕನ್ನಡಿಗರ ತಾಯಿ' ಪದ್ಯವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **5x1=5**

ಜೈನರಾದ ಪೂಜ್ಯಪಾದ ಕೊಂಡಕುಂದವರ್ಯರ,
ಮಧ್ಯಯತಿಯ ಬಸವಪತಿಯ ಮುಖ್ಯ ಮತಾಚಾರ್ಯರ
ಶರ್ವ ಪಂಪ ರನ್ನರ,
ಲಕ್ಷ್ಮೀಪತಿ ಜನ್ನರ,
ಷಡಕ್ಷರಿ ಮುದ್ದಣ್ಣರ,
ಪುರಂದರ ವರೇಣ್ಯರ, ತಾಯೆ,
ನಿನ್ನ ಬಸಿರೆ ಹೊನ್ನಗನಿ ವಿದ್ಯಾರಣ್ಯರ!

ಹಳೆಯ ಬೀಡ ಬೇಲನಾಡ ಮಾಡಮೆನಿತೊ ಸುಂದರಂ!
ಬಿಳಿಯ ಕೊಳದ ಕಾರಕಳದ ನಿಡುಕರೆನಿತೊ ಬಂಧುರಂ!
ಇಲ್ಲಿಲ್ಲದ ಶಿಲ್ಪವಿಲ್ಲ;
ನಿನ್ನ ಕಲ್ಲೆ ನುಡಿವುದಲ್ಲ!
ಹಿಂಗತೆಯಿನಿವಾಲ ಸೊಲ್ಲ ನೆಮ್ಮತೃಷೆಗೆ ದಕ್ಕಿಸು!
ಹೊಸತು ಕಿನ್ನರಿಯಲಿ ನಿನ್ನ ಹಳೆಯ ಹಾಡನುಕ್ಕಿಸು!

ತನ್ನ ಮರೆಯ ಕಂಪನರಿಯದದನೆ ಹೊರಗೆ ಹುಡುಕುವ
ಮೃಗದ ಸೇಡು ನಮ್ಮ ಪಾಡು ಪರರ ನುಡಿಗೆ ಮಿಡುಕುವ!
ಕನ್ನಡ ಕಸ್ತೂರಿಯನ್ನ
ಹೊಸತುಸಿರಿಂ ತೀಡದನ್ನ ಸುರಭಿ ಎಲ್ಲಿ? ನೀನದನ್ನ
ನವಶಕ್ತಿಯಿನೆಬ್ಬಿಸು-
ಹೊಸ ಸುಗಂಧದೊಸಗೆಯಿಂದ ಜಗದಿ ಹೆಸರ ಹಬ್ಬಿಸು।

ನಮ್ಮೆದೆಯಂ ತಾಯೆ ಬಲಿಸು,
ಎಲ್ಲರ ಬಾಯಲ್ಲಿ ನೆಲಸು,
ನಮ್ಮ ಮನಮನೊಂದೆ ಕಲಸು!
ಇದನೊಂದನೆ ಕೋರುವೆ!
ನಿನ್ನ ಮೂರ್ತಿ ಜಗತ್ಕೀರ್ತಿ ಎಂದಿಗೆಮಗೆ ತೋರುವೆ?

**ಪ್ರಶ್ನೆಗಳು :**

1. ಕನ್ನಡ ತಾಯಿಯ ಬಸಿರ ಹೊನ್ನಗನಿ ಯಾರು?
2. ಯಾವುದರ ಮಾಡು ಸುಂದರವಾಗಿದೆ?
3. ಕನ್ನಡ ತಾಯಿಯ ಹಾಡನ್ನು ಯಾವುದರಿಂದ ಉಕ್ಕಿಸಬೇಕು?
4. ಕನ್ನಡಿಗರ ಪಾಡು ಏನಾಗಿದೆ?
5. ಈ ಪದ್ಯವನ್ನು ಬರೆದಿರುವ ಕವಿಯ ಹೆಸರನ್ನು ಬರೆಯಿರಿ.

## ವಿಭಾಗ-ಬಿ
## (ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ- 20ಅಂಕಗಳು)

**V. ಕೆಳಗಿನ ಪ್ರತಿಯೊಂದು ಬಹುಆಯ್ಕೆಯ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. 10X1=10**

1. 'ಕುಟಿಲ' ಪದದ ಸಮಾನಾರ್ಥಕ ಪದ ____________
   A) ನಗು B) ಮೋಸ C) ನ್ಯಾಯ D) ಧರ್ಮ

2. 'ಫಲ' ಪದದ ವಿರುದ್ಧ ಪದ _______________
   A) ನಿಷ್ಫಲ B) ಸಫಲ C) ಅಫಲ D) ವಿಫುಲ

3. 'ಮಳೆಯು <u>ರಪರಪ</u> ಎಂದು ಜೋರಾಗಿ ಸುರಿಯಿತು' – ಈ ವಾಕ್ಯದಲ್ಲಿ ಗೆರೆ ಎಳೆದ ಪದವು _________ ವ್ಯಾಕರಣಕ್ಕೆ ಉದಾಹರಣೆಯಾಗಿದೆ.
   A) ದ್ವಿರುಕ್ತಿ B) ಅನುಕರಣಾವ್ಯಯ C) ಜೋಡಿಪದ D) ನುಡಿಗಟ್ಟು

4. 'ವಿನೋದ' – ಪದದ ತದ್ಭವ ರೂಪ:
   A) ಬಿನೋದ B) ವನದ C) ಬನದ D) ಬಿನದ

5. 'ತರಗತಿಯಲ್ಲಿ ವಿದ್ಯಾರ್ಥಿಗಳು ಪಾಠವನ್ನು ಆಸಕ್ತಿಯಿಂದ ಆಲಿಸುತ್ತಿದ್ದರು.'- ಈ ವಾಕ್ಯದಲ್ಲಿರುವ ಅನ್ವರ್ಥನಾಮ___________
   A) ತರಗತಿ B) ಪಾಠವನ್ನು C) ವಿದ್ಯಾರ್ಥಿಗಳು D) ಆಸಕ್ತಿಯಿಂದ

6. 'ಪರಮೋಚ್ಚ' – ಪದವು ಈ ಸಂಧಿಗೆ ಉದಾಹರಣೆಯಾಗಿದೆ.
   A) ಲೋಪ ಸಂಧಿ B) ಸವರ್ಣದೀರ್ಘ ಸಂಧಿ C) ಆದೇಶ ಸಂಧಿ D) ಗುಣ ಸಂಧಿ

7. 'ವನದಿಂದ'– ಈ ಪದದಲ್ಲಿನ ವಿಭಕ್ತಿಯನ್ನು ಗುರುತಿಸಿ.
   A) ಪ್ರಥಮಾ B) ದ್ವಿತೀಯಾ C) ತೃತೀಯಾ D) ಸಪ್ತಮೀ

8. 'ಗೀತಾ ಹಾಡನ್ನು ಬಲು ಇಂಪಾಗಿ ಹಾಡಿದಳು.'- ಈ ವಾಕ್ಯದಲ್ಲಿ ಕ್ರಿಯಾಪದದ ಧಾತು__________
   A) ಹಾಡನ್ನು B) ಹಾಡು C) ಹಾಡಿ D) ಹಾಡಿದಳು

9. 'ಪಠ- ಪಾಠ' – ಈ ಪದಗಳ ಅರ್ಥವ್ಯತ್ಯಾಸ ಕ್ರಮವಾಗಿ _____________ ಆಗಿದೆ.
   A) ಗದ್ಯ-ಭಾವಚಿತ್ರ B) ಗಾಳಿಪಟ- ಚಿತ್ರಪಟ C) ಭಾವಚಿತ್ರ- ಗದ್ಯ D) ಹಲಗೆ- ಲೇಖನ

10. ಅತಿಥಿಗಳು ವಿಧವಿಧವಾದ ಹಣ್ಣುಹಂಪಲುಗಳನ್ನು ತಂದು ಕೊಟ್ಟರು. – ಈ ವಾಕ್ಯದಲ್ಲಿರುವ ಜೋಡಿಪದ :
    A) ವಿಧವಿಧವಾದ B) ಹಣ್ಣುಹಂಪಲು C) ಅತಿಥಿಗಳು D) ತಂದು ಕೊಟ್ಟರು.

**VI. ಕೆಳಗಿನವುಗಳನ್ನು ಸೂಚನೆಯಂತೆ ಬರೆಯಿರಿ. 5X1=5**

1. 'ಮಸಿಹಚ್ಚು' – ಈ ಪದವನ್ನು ಬಳಸಿ ಸ್ವಂತ ವಾಕ್ಯವನ್ನು ರಚಿಸಿರಿ.
2. ದೇಶದೆಲ್ಲೆಡೆಯಿಂದ ಭಕ್ತಾದಿಗಳು ಕುಂಭ ಮೇಳಕ್ಕೆ ಬರುವರು. ( ಈ ವಾಕ್ಯವನ್ನು ಭೂತಕಾಲದಲ್ಲಿ ಬರೆಯಿರಿ.)

3. 'ಯುವತಿಯು ಗ್ರಂಥಾಲಯದಲ್ಲಿ ಓದುತ್ತಾ ಕುಳಿತಿರುವಳು.' (ಈ ವಾಕ್ಯವನ್ನು ಲಿಂಗ ಬದಲಿಸಿ ಬರೆಯಿರಿ.)
4. ಆಮೆಯು ನದಿಯ ತೀರದಲ್ಲಿ ಹೋಗುತ್ತಿತ್ತು. (ಈ ವಾಕ್ಯದ ವಚನವನ್ನು ಬದಲಿಸಿ ಬರೆಯಿರಿ)
5. "ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ" (ಈ ಗಾದೆಯ ಒಳಾರ್ಥವನ್ನು ಬರೆಯಿರಿ.)

**VII. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. 5X1=5**

1. ಬೂದಿಯನ್ನು ಕೊಳದಲ್ಲಿ ಬೀಗಿದಾಗ ________________ಯು ಅರಳುತ್ತದೆ.
   A) ತಾವರೆ B) ಗುಲಾಬಿ C) ಮಲ್ಲಿಗೆ D) ಸಂಪಿಗೆ

2. ವರದಕ್ಷಿಣೆ ಎಂಬ ಪಿಶಾಚಿ _______________ ಬಲಿ ತೆಗೆದುಕೊಂಡಿತು.
   A) ಪ್ರಿಯಳನ್ನು B) ವಿಜಯಳನ್ನು C) ಸೀತೆಯನ್ನು D) ಶಾಂತಿಯನ್ನು

3. ದೇಹ ತನ್ನ _________________ ನೆನೆದು ವ್ಯರ್ಥವಾಗಿದೆ.
   A) ಒಳಿತನ್ನು B) ಆರೋಗ್ಯವನ್ನು C) ಸ್ವಾರ್ಥವನ್ನು D) ಕ್ಷೇಮವನ್ನು

4. ಮುದುಕನು ಒಬ್ಬ _______________________ ವ್ಯಾಪಾರಿ.
   A) ವಜ್ರದ B) ರತ್ನದ C) ಚಿನ್ನದ D) ಬಂಗಾರದ

5. ಯುವಕನಿಗೆ __________________ ಗೆ ಹೋಗಬೇಕೆಂಬ ಆಸೆಯಿತ್ತು.
   A) ಅಮೇರಿಕಾ B) ಜರ್ಮನಿ C) ಇಂಗ್ಲೆಂಡ್ D) ಜಪಾನ್

**PART- B: (40 ಅಂಕಗಳು)**
**ವಿಭಾಗ-ಸಿ**
**(ಬರವಣಿಗೆ ಕೌಶಲ್ಯ : 12 ಅಂಕಗಳು)**

**VIII. ನಿಮ್ಮ ಶಾಲೆಯಲ್ಲಿ ಆಚರಿಸಿದ ಪರಿಸರ ದಿನಾಚರಣೆಯನ್ನು ಕುರಿತು ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರವನ್ನು ಬರೆಯಿರಿ. 1X4=4**

**IX. ನಿಮ್ಮ ಶಾಲೆಯಲ್ಲಿ ನಡೆದ 'ಯೋಗ ಮತ್ತು ಸಂಗೀತ' ದಿನಾಚರಣೆಯನ್ನು ಕುರಿತು ಒಂದು ವರದಿ ತಯಾರಿಸಿ. 1X4=4**

**X. ಈ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1X4=4**

**1.** ರಾಷ್ಟ್ರೀಯ ಭಾವೈಕ್ಯತೆ
**2.** ಜಾಗತಿಕ ತಾಪಮಾನ
**3.** ಪರಿಸರ ಮಾಲಿನ್ಯ

## ವಿಭಾಗ-ಡಿ
## (ಪಠ್ಯಗಳ ಅಧ್ಯಯನ: 28 ಅಂಕಗಳು)

**XI. ಈ ಕೆಳಗಿನ ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ.** **4X2=8**

**1.** ಹುಸೇನ್ ಸಾಹೇಬರ ವ್ಯಕ್ತಿತ್ವವನ್ನು ವಿವರಿಸಿ.
**2.** ಜಪ ಹಾಗೂ ಉಪವಾಸ ವ್ರತಗಳ ಫಲ ಯಾವಾಗ ದೊರೆಯುವುದಿಲ್ಲ?
**3.** ಬೂದಿಯನ್ನು ಗಾಳಿಯಲ್ಲಿ ತೂರಿದಾಗ ಎಲ್ಲಿ ಬೀಳುತ್ತದೆ ಹಾಗೂ ಹೊಳೆಯಲ್ಲಿ ಹರಿಯಬಿಟ್ಟಾಗ ಯಾರಿಗೆ ಸಿಗುತ್ತದೆ?
**4.** ಯುವಕನು ಬಡವರ ಹುಡುಗಿಯನ್ನು ಮದುವೆಯಾಗದಿರಲು ಕಾರಣಗಳೇನು?

**XII. ಈ ಕೆಳಗಿನ ಪ್ರಶ್ನೆಗಳಿಗೆ 5-6 ವಾಕ್ಯಗಳಲ್ಲಿ ಉತ್ತರಿಸಿ.** **2X3=6**

**1.** ಯಶೋಧರೆ ಮಂಡಿಯೂರಿ ನಮಸ್ಕರಿಸುತ್ತಾ ಏನು ಹೇಳುತ್ತಾಳೆ?
**2.** ಬಡವ ಬಲ್ಲಿದನಾಗುವನು ಎಂಬುದಕ್ಕೆ ಕವಿ ನೀಡಿರುವ ನಿದರ್ಶನಗಳಾವುವು?

**XIII. ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಹಾಗೂ ಸ್ವಾರಸ್ಯದೊಡನೆ ವಿವರಿಸಿ.** **2X3=6**

**1.** "ಸೋದರಿಯ ಸುತೆಯೆಂದು ಎಳೆತನದಲೇ ನನ್ನ ಕರೆತಂದು ಸಾಕಿದಿರಿ"

**ಅಥವಾ**

"ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ"

**2.** "ನಿನ್ನ ಕಲ್ಲೇ ನುಡಿವುದಲ್ಲ"

**ಅಥವಾ**

"ಸದ್ಧರ್ಮದಾ ಸತಿಯೇ ಸರ್ವಕೆ ಸಾಧನಂ"

**XIV. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ.** **1X4=4**

**1.** ಕರೀಮ ಧನವಂತನಾದ ಬಗೆ ಹೇಗೆ? ವಿವರಿಸಿ.

**ಅಥವಾ**

ತಂದೆಯನ್ನು ಕರೆತರಲು ಹೋಗುವೆನೆಂದು ಹೇಳಿದವರಾರು? ಬೇಹಿನವರನ್ನು ಕಳಿಸುವ ವಿಚಾರದಲ್ಲಿ ರಾಹುಲನ ಅಭಿಪ್ರಾಯವೇನು?

**XV. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ.** **1X4=4**

**1.** ಪುರಂದರ ದಾಸರ ದೃಷ್ಟಿಯಲ್ಲಿ ನಮ್ಮ ಶ್ರಮಕ್ಕೆ ಫಲ ದೊರೆಯುವುದು ಯಾವಾಗ? ವಿವರಿಸಿ.

**ಅಥವಾ**

ಸುವ್ರತಿ ಹಾಗೂ ಸುತನ ಬಗೆಗೆ ಕವಿ ಏನು ಹೇಳಿದ್ದಾನೆ? ಶ್ರೇಷ್ಠ ಮಂತ್ರಿಯಲ್ಲಿರಬೇಕಾದ ಲಕ್ಷಣಗಳೇನು?

******************************